# Know your Rights and Responsibilities

# ನಿಮ್ಮ ಹಕ್ಕು ಮತ್ತು ಜವಾಬ್ದಾರಿಯನ್ನು ಅರಿತುಕೊಳ್ಳಿ

LIFE'S ON

## PATIENT RIGHTS

- **Right to Information:** You have the right to receive information about the name and qualification of your treating doctor, your state of health, possible complications and its prevention, approximate cost of treatment, treatment plan, use of medications, diet and nutrition and how to voice your complaint and you have the right to access your clinical records.
- **Right to Consent:** You have the right to give or withhold your consent for any proposed care. You have the right to seek a second medical opinion before giving the consent. You have the right to refuse consent before initiation of clinical research/ clinical trial.
- **Right to Choose/Participate:** You have the right to know all your treatment options and to participate in decisions about your care and you have rights to refuse the treatment.
- **Right to Privacy:** You have the right to receive reasonable privacy during consultation / examination, treatment and various investigative procedures. You have the right to have your healthcare information protected. Information concerning ones health and treatment may only be disclosed with informed consent, except when required in terms of any law or an order of the court.
- **Right to Respect:** You have the right to receive appropriate care regardless of race, culture, religion, age, gender or physical ability and not to be subjected to any kind of abuse or neglect.
- **Right to Quality Care:** You have the right to receive medical care in accordance with reasonably expected professional standards of care.

## PATIENT RESPONSIBILITIES

As a patient you have responsibility to:

- Provide complete and accurate history and information about your health, including present condition, past illnesses, hospitalizations, medications or any other matter that pertains to your health.
- Provide complete and accurate information including full name, address and other relevant information.
- Follow the prescribed treatment plan and carefully comply with the instructions given and attend follow up appointments as requested.
- Ask questions when you do not understand any information given by doctor or other members of the health care team. Also inform the doctor if you anticipate any problem in the prescribed treatment or are considering alternate / complementary therapies.
- Accept responsibility for the decisions you make regarding the treatment.
- Abide by all hospital rules and regulations:
  - Comply with the NO SMOKING policy.
  - Comply with the visitor policies
  - Be considerate of noise levels, privacy, and safety.
  - Weapons are prohibited on the premises.
  - Treat hospital staff, other patients, and visitors with courtesy and respect.
- Be on time for appointments.
- Cancel or reschedule appointments as far in advance as possible when required.
- Do not take any medications on your own without the knowledge of the doctor and health care professionals.
- Communicate with the health care provider if the patient's condition worsens or does not follow the expected course.
- Do not give medication prescribed for you to others.
- Provide complete and accurate information for insurance claims and work with the hospital for processing claims and to make payments if the same is denied.
- Pay for services billed for in a timely manner as per the hospital policies.
- Respect situations when another patient's medical condition may be more urgent than yours and accept that the Doctor may need to attend them first.
- Understand the charter of rights and seek clarification if any.

In case you require any clarification or have suggestions to make or have a grievance, please contact the Customer Care Cell or dial 1234 from any extension in the hospital and follow the in structions or email to customer.care@manipalhospitals.com.

## ರೋಗಿಯ ಹಕ್ಕುಗಳು

- **ಮಾಹಿತಿಯನ್ನು ಪಡೆಯುವ ಹಕ್ಕು**:– ನಿಮ್ಮನ್ನು ಚಿಕಿತ್ಸೆ ಮಾಡುವ ವೈದ್ಯರ ಹೆಸರು ಮತ್ತು ವ್ಯಾಸಂಗ, ನಿಮ್ಮ ಆರೋಗ್ಯದ ಸ್ಥಿತಿಗತಿ, ಉಂಟಾಗಬಹುದಂತಹ ರೋಗದ ತೊಡಕು ಮತ್ತು ಅದನ್ನು ಚಿಕಿತ್ಸೆ ಮಾಡುವ ಅಥವಾ ತಡೆಯುವ ವಿಧಾನ, ಚಿಕಿತ್ಸೆಗೆ ತಗಲುವ ಅಂದಾಜು ವೆಚ್ಚ, ಚಿಕಿತ್ಸೆಯ ತಂತ್ರ ಮತ್ತು ವಿಧಾನ, ಔಷದ ಉಪಯೋಗಿಸುವ ವಿಧಾನ, ಪಥ್ಯ ಮತ್ತು ಅಹಾರದ ವಿಧಾನ ಹಾಗು ದೂರು ಸಲ್ಲಿಸುವ ವಿಧಾನದ ಬಗ್ಗೆ ಮಾಹಿತಿಯನ್ನು ಪಡೆಯುವ ಹಾಗು ನಿಮ್ಮ ವೈದ್ಯಕೀಯ ದಾಖಲೆಗಳನ್ನು ಪರಿಶಿಲಿಸುವ ಹಕ್ಕು ನಿಮಗಿರುತ್ತದೆ.
- **ಅಂಗೀಕಾರ/ಒಪ್ಪಿಗೆಯ ಪತ್ರದ ಹಕ್ಕು**:– ನಿಮ್ಮನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಅಥವಾ ಚಿಕಿತ್ಸೆ ಮಾಡುವುದಕ್ಕೆ ಒಪ್ಪಿಗೆಯ ಪತ್ರ ನೀಡುವುದನ್ನು ಅಂಗೀಕರಿಸುವ ಅಥವಾ ಅಂಗೀಕರಿಸದಿರುವ ಹಕ್ಕು, ಒಪ್ಪಿಗೆ ಪತ್ರ ನೀಡುವ ಮುಂಚಿತವಾಗಿ ನಿಮಗೆ ಬದಲಿ ವೈದ್ಯರಲ್ಲಿ ದ್ವಿತೀಯ ವೈದ್ಯಕೀಯ ಸಲಹೆಯನ್ನು ತೆಗೆದುಕೊಳ್ಳುವ ಹಕ್ಕು ಹಾಗು ವೈದ್ಯರು ನಿಮ್ಮನ್ನು ವೈದ್ಯಕೀಯ ಸಂಶೋಧನೆಯ / ವೈದ್ಯಕೀಯ ಪ್ರಯೋಗದ ಚಿಕಿತ್ಸೆಗೆ ಒಳಪಡಿಸುವದನ್ನು ಮುಂಚಿತವಾಗಿ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
- **ವೈದ್ಯಕೀಯ ಶುಶ್ರೂಷೆ/ಚಿಕಿತ್ಸೆಯಲ್ಲಿ ಪಾಲ್ಗೊಳ್ಳುವ ಹಕ್ಕು**:– ನಿಮ್ಮ ಶುಶ್ರೂಷೆಗೆ ಅಗತ್ಯವಿರುವ ಎಲ್ಲಾ ಚಿಕಿತ್ಸಾ ಕ್ರಮಗಳ ಬಗ್ಗೆ ತಿಳುವಳಿಕೆ ಹೊಂದುವ ಹಾಗು ಅಗತ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕು ನಿಮಗಿರುತ್ತದೆ ಮತ್ತು ಚಿಕಿತ್ಸೆಯನ್ನು ನಿರಾಕರಿಸುವ ಹಕ್ಕನ್ನು ನೀವು ಹೊಂದಿದ್ದೀರಿ.
- **ವೈಯುಕ್ತಿಕತೆಯ ಹಕ್ಕು**:– ನಿಮ್ಮ ವೈದ್ಯಕೀಯ ಸಲಹೆ ಪಡೆಯುವ, ಪರೀಕ್ಷೆ ಮಾಡುವ ಹಾಗು ಚಿಕಿತ್ಸೆಯ ಸಮಯದಲ್ಲಿ ನಿಮ್ಮ ಅರೋಗ್ಯದ ಮಾಹಿತಿಯ ವೈಯುಕ್ತಿಕತೆಯನ್ನು ಕಾಪಾಡಿಕೊಳ್ಳುವ ಹಕ್ಕು ನಿಮಗಿರುತ್ತದೆ. ನಿಮ್ಮ ಆರೋಗ್ಯದ ಹಾಗು ಚಿಕಿತ್ಸೆಯ ಮಾಹಿತಿಯನ್ನು ನಿಮ್ಮ ಒಪ್ಪಿಗೆಯ ಮೇರೆಗೆ ಹೊರಗೆಡುವಲಾಗುತ್ತದೆ ಅಲ್ಲದೇ ನಿಮ್ಮ ವಿಮಾ ಕಂಪನಿಗೆ ಮಾಹಿತಿಯು ಬೇಕಿದ್ದಲ್ಲಿ ಅಥವಾ ಕಾನೂನಿನ ಚೌಕದಲ್ಲಿ ಅಗತ್ಯವಿದ್ದಲ್ಲಿ ಮಾತ್ರ ಹೊರಗೆಡವಬಹುದಾಗಿದೆ.
- **ಗೌರವಿಸಲ್ಪಡುವ ಹಕ್ಕು**:– ನಿಮ್ಮ ಸಂಸ್ಕಾರ, ಜಾತಿ, ಪಂಗಡ, ಧರ್ಮ, ವಯಸ್ಸು, ಲಿಂಗ ಹಾಗು ಸ್ಥಿತಿಗತಿಯ ಹೊರತಾಗಿಯೂ ನೀವು ಚಿಕಿತ್ಸೆ ಪಡೆಯುವ ಹಕ್ಕು ನಿಮಗಿರುತ್ತದೆ. ಯಾವುದೇ ರೀತಿಯ ನಿಂದನೆ ಅಥವಾ ತಾತ್ಸಾರಕ್ಕೆ ಒಳಪಡಿಸಲಾಗುವುದಿಲ್ಲ.
- **ಉತ್ತಮ ಗುಣಮಟ್ಟದ ಚಿಕಿತ್ಸೆಯ ಹಕ್ಕು**:– ನಿಮಗೆ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ತಜ್ಞ ವೈದ್ಯರಿಂದ ಪಡೆಯುವ ಹಕ್ಕನ್ನು ಕಾಯ್ದಿರಿಸಿದೆ.

## ರೋಗಿಯ ಜವಾಬ್ದಾರಿಗಳು

ರೋಗಿಯಾದ ನಿಮ್ಮ ಹಾಗು ನಿಮ್ಮ ಪರಿಚಾರಕರ ಜವಾಬ್ದಾರಿಗಳು ಹೀಗಿರುತ್ತವೆ.

- ನಿಮ್ಮ ಪೂರ್ಣ ಹೆಸರು, ವಿಳಾಸ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸುವುದು ನಿಮ್ಮ ಜವಾಬ್ದಾರಿಯಾಗಿದೆ.
- ರೋಗದ ಬಗೆಗಿನ ನಿಮ್ಮ ಸಂಪೂರ್ಣ ಚರಿತ್ರೆ ಹಾಗು ಮಾಹಿತಿಯನ್ನು ನೀಡತಕ್ಕದ್ದು. ಪ್ರಸ್ತುತ ಸ್ಥಿತಿ, ಹಿಂದಿನ ಅನಾರೋಗ್ಯ, ದಾಖಲಾದ ಇತರ ಅಸ್ಪತ್ರೆಯ ವಿವರಗಳು, ತೆಗೆದುಕೊಂಡ ಔಷದೀಯ ವಿವರಗಳು ಹಾಗು ಇನ್ಯಾವುದೇ ಆರೋಗ್ಯ ಸಂಬಂದಿತ ಮಾಹಿತಿಯನ್ನು ತಿಳಿಸುವುದು ನಿಮ್ಮ ಜವಾಬ್ದಾರಿಯಾಗಿದೆ.
- ವೈದ್ಯರು ಹೇಳಿದ ಔಷದಿ ಹಾಗು ಇತರ ಸೂಚನೆಗಳನ್ನು ಪಾಲಿಸುವುದು ನಿಗದಿತವಾಗಿ ವೈದ್ಯರನ್ನು ಭೇಟಿಯಾಗುವುದು ನಿಮ್ಮ ಜವಾಬ್ದಾರಿಯಾಗಿದೆ.
- ನಿಮ್ಮ ವೈದ್ಯರು ಅಥವಾ ವೈದ್ಯಕೀಯ ಸಿಬ್ಬಂದಿ ತಿಳಿಸಿದ ವಿಷಯವು ಅರ್ಥವಾಗದಿದ್ದರೆ ಅವರನ್ನು ಮತ್ತೆ ಕೇಳಿ ತಿಳಿದುಕೊಳ್ಳಬೇಕು ಹಾಗು ನೀವು ತೆಗೆದುಕೊಂಡ ಚಿಕಿತ್ಸೆ ಅಥವಾ ಔಷಧಿಯಿಂದ ಇನ್ಯಾವುದೇ ದುಷ್ಪರಿಣಾಮಗಳು ಉಂಟಾದಲ್ಲಿ ನಿಮ್ಮ ವೈದ್ಯರಿಗೆ ತಪ್ಪದೇ ತಿಳಿಸಬೇಕು.
- ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವ ವಿಷಯದಲ್ಲಿ ನೀವು ತೆಗೆದುಕೊಂಡ ನಿರ್ಧಾರಕ್ಕೆ ನೀವೆ ಹೊಣೆಯಾಗಿರುತ್ತೀರಿ.
- ಆಸ್ಪತ್ರೆಯ ಎಲ್ಲಾ ನೀತಿ ನಿಯಮಾವಳಿಗಳನ್ನು ತಪ್ಪದೇ ಪಾಲಿಸಬೇಕು.
  - ಆಸ್ಪತ್ರೆಯ ಆವರಣದಲ್ಲಿ ದೂಮಪಾನ ಮಾಡಬಾರದು.
  - ರೋಗಿಯ ಭೇಟಿಯ ನಿಯಮಾವಳಿಗಳನ್ನು ಪಾಲಿಸಬೇಕು.
  - ಆಸ್ಪತ್ರೆಯ ಅವರಣದಲ್ಲಿ ಶಬ್ಧ ಮಾಲಿನ್ಯತೆ, ವೈಯುಕ್ತಿಕತೆ ಹಾಗು ಭದ್ರತೆಯ ಬಗ್ಗೆ ಕಾಳಜಿಯನ್ನು ಹೊಂದಿರಬೇಕು.
  - ಆಯುಧಗಳ ನಿಷೇಧನೆಯ ಬಗ್ಗೆ ಅರಿವಿರಬೇಕು.
  - ವೈದ್ಯರು, ಆಸ್ಪತ್ರೆಯ ಸಿಬ್ಬಂದಿ ಹಾಗು ಇತರ ರೋಗಿ ಮತ್ತು ಪರಿಚಾರಕರಲ್ಲಿ ಶಿಷ್ಟಾಚಾರ ಹಾಗು ಗೌರವದಿಂದ ನಡೆದುಕೊಳ್ಳಬೇಕು.
  - ವೈದ್ಯರನ್ನು ಭೇಟಿಯಾಗಲು ಪೂರ್ವ ನಿಗದಿತ ಸಮಯವನ್ನು ಪಾಲಿಸಬೇಕು.
  - ವೈದ್ಯರ ಭೇಟಿಯನ್ನು ಅಥವಾ ಭೇಟಿಯ ಸಮಯವನ್ನು ರದ್ದು ಮಾಡುವ ಅಥವಾ ಬದಲಾಯಿಸುವಿಕೆಯನ್ನು ಆದಷ್ಟು ಮುಂಚಿತವಾಗಿ ತಿಳಿಸತಕ್ಕದ್ದು.
- ಯಾವುದೇ ಔಷಧಿಯನ್ನು ವೈದ್ಯರ ಅಥವಾ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಯ ಗಮನಕ್ಕೆ ತರದೇ ನಿಮ್ಮ ಸ್ವಂತ ಬುದ್ದಿಯಿಂದ ತೆಗೆದುಕೊಳ್ಳಬಾರದು.
- ಯಾವುದೇ ಔಷಧಿಯಿಂದ ಅಥವಾ ಮತ್ಯಾವುದೇ ಕಾರಣದಿಂದ ರೋಗಿಯ ಸ್ಥಿತಿಯು ಹದಗೆಟ್ಟಲ್ಲಿ ಆಸ್ಪತ್ರೆಯ ಸಿಬ್ಬಂದಿಗೆ ತಿಳಿಸಬೇಕು.
- ನಿಮಗೆ ನೀಡಿದ ಔಷದಿಯನ್ನು ಇತರರಿಗೆ ಕೊಡಬಾರದು.
- ವಿಮಾ ಕಂಪನಿಯಲ್ಲಿ ವ್ಯವಹರಿಸಲು ಆಸ್ಪತ್ರೆಯ ಸಿಬ್ಬಂದಿಯ ನೆರವನ್ನು ಪಡೆಯಬಹುದಾಗಿದೆ ಹಾಗು ವಿಮಾ ಕಂಪನಿಯು ವೈದ್ಯಕೀಯ ವೆಚ್ಚವನ್ನು ನಿರಾಕರಿಸಿದಲ್ಲಿ ಆ ವೆಚ್ಚವನ್ನು ಭರಿಸುವುದು ನಿಮ್ಮ ಜವಾಬ್ದಾರಿಯಾಗಿರುತ್ತದೆ.
- ಆಸ್ಪತ್ರೆಯ ನಿಯಮದ ಅನುಗುಣವಾಗಿ ಚಿಕಿತ್ಸಾ ವೆಚ್ಚವನ್ನು ನಿಗದಿತ ಸಮಯಕ್ಕೆ ತಪ್ಪದೇ ಪಾವತಿಸುವುದು ನಿಮ್ಮ ಜವಾಬ್ದಾರಿಯಾಗಿದೆ.
- ಇತರ ರೋಗಿಯ ಸ್ಥಿತಿ ನಿಮಗಿಂತ ಚಿಂತಾಜನಕವಾಗಿದ್ದಲ್ಲಿ ಅಂತಹ ರೋಗಿಗೆ ಮೊದಲು ಚಿಕಿತ್ಸೆ ನೀಡುವುದನ್ನು ಗೌರವಿಸಿ ಹಾಗು ಅಂತಹ ಸಮಯದಲ್ಲಿ ವೈದ್ಯರಿಗೆ ಮತ್ತು ವೈದ್ಯಕೀಯ ಸಿಬ್ಬಂದಿಗೆ ಚಿಕಿತ್ಸೆ ನೀಡಲು ಸಹಕರಿಸಿ.
- ನಿಮ್ಮ ಹಕ್ಕು ಬಾದ್ಯತೆಯನ್ನು ಅರ್ಥಮಾಡಿಕೊಳ್ಳಿ ಹಾಗು ಇನ್ಯಾವುದೇ ಸ್ಪಷ್ಟೀಕರಣ ಬೇಕಿದ್ದಲ್ಲಿ ಕೇಳಿ ತಿಳಿದುಕೊಳ್ಳಿ.

ಇನ್ಯಾವುದೇ ಸ್ಪಷ್ಟೀಕರಣ ಬೇಕಿದ್ದಲ್ಲಿ ಅಥವಾ ಸಲಹೆಗಳಿದ್ದಲ್ಲಿ ನಮ್ಮ ಗ್ರಾಹಕ ಸೇವಾ ವಿಬಾಗದ ಸಿಬ್ಬಂದಿಯನ್ನು ಸಂಪರ್ಕಿಸಿ ಅಥವಾ ಆಸ್ಪತ್ರೆಯ ಯಾವುದೇ ದೂರವಾಣಿಯಿಂದ 1234 ಕ್ಕೆ ಕರೆ ಮಾಡಿರಿ ಅಥವಾ customer.care@manipalhospitals.com ಗೆ ಇ-ಮೈಲ್ ಕಳಿಸಿ.